**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,**
**ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.**

**ಎಸ್.ಸಿ.ನಂ.286/2023**

ಪಿರ್ಯಾದುದಾರರು : ಸರ್ಕಾರದ ಪರ ಹೊಸಕೋಟೆ ಪೊಲೀಸರು

- ವಿರುದ್ಧ -

ಆರೋಪಿ : 1. ಬಿಸ್ವಜಿತ್ ಸಾಹಾ @ ಬಿಕ್ಕಿ @ ವಿಕ್ಕಿ,
ತಂದೆಃ ಸನ್ಕರ್ ಸಾಹಾ,
ವಯಸ್ಸುಃ 28 ವರ್,
ವಾಸಃ ನಿರಂಜನ್ ನಗರ್ ಕಾಲೋನಿ
(ANGSHIK), ಸಿಲಿಗುರಿ (MCORP),
ಭಕ್ತಿ ನಗರ್,
ಜಲ್ಪೈಗುರಿ,
ವೆಸ್ಟ್ ಬೆಂಗಾಲ್.

**ದೋಷಾರೋಪಣೆ**

ನಾನು, ಶ್ರೀ ಎಂ. ಎಲ್. ರಘುನಾಥ್ ಬಿ.ಎ., ಎಲ್‌ಎಲ್.ಎಮ್, ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು, ನಿಮ್ಮ – ಆರೋಪಿಯ ಮೇಲೆ ಮಾಡುವ ದೋಷಾರೋಪಣೆ ಏನೆಂದರೆ:

ಮೃತ ರಾಘವೇಂದ್ರನು 1ನೇ ಆರೋಪಿಯಾದ ನಿಮ್ಮಿಂದ 2,500/- ರೂಗಳನ್ನು ಸಾಲವಾಗಿ ಪಡೆದುಕೊಂಡಿದ್ದು, ಸದರಿ ಸಾಲದ ಹಣವನ್ನು ಮೃತ ರಾಘವೇಂದ್ರನು ವಾಪಸು ಕೊಡದೆ ಸತಾಯಿಸುತ್ತಿದ್ದಾನೆಂದು ಈ ಸಾಲದ ಹಣದ ವಿಚಾರದಲ್ಲಿ ದಿನಾಂಕಃ26/06/2022 ರಂದು ಸಂಜೆ 1 ಹಾಗೂ 2ನೇ ಆರೋಪಿ ಉಳಿದುಕೊಂಡಿದ್ದ ನಿವೇಶನ ಸಂಖ್ಯೆ-221ರ ಖಾಲಿ ನಿವೇಶನದಲ್ಲಿರುವ ಲೇಬರ್ ಶೆಡ್ ಬಳಿ ಆರೋಪಿತರಾದ ನಿಮ್ಮ ಮತ್ತು ಮೃತ ರಾಘವೇಂದ್ರನ ನಡುವೆ ಜಗಳವಾಗಿ, ಅದೇ ದಿನ ರಾತ್ರಿ ಸುಮಾರು 8-00 ಗಂಟೆ ಸಮಯದಲ್ಲಿ ಲೇಬರ್ ಶೆಡ್ ಬಳಿ ಮೃತ ರಾಘವೇಂದ್ರನು ನಮ್ಮನ್ನೇ ಸಾಯಿಸಲು ಬರುತ್ತಿದ್ದಾನೆಂದು, ಆತನನ್ನು ಬಿಡಬಾರದೆಂದು,

ಆರೋಪಿತರು ರಾಘವೇಂದ್ರನನ್ನೇ ಸಾಯಿಸುವ ಸಮಾನ ಉದ್ದೇಶಹೊಂದಿ, 2 ನೇ ಆರೋಪಿಯು ರಾಘವೇಂದ್ರನನ್ನು ತಳ್ಳಿ ಕೆಳಕ್ಕೆ ಬೀಳಿಸಿ ಆತನ ಮೇಲೆ ಕುಳಿತುಕೊಂಡು ಬಿಗಿಯಾಗಿ ಹಿಡಿದುಕೊಂಡಿದ್ದು, ಆಗ 1 ನೇ ಆರೋಪಿಯಾದ ನೀವು ಪಕ್ಕದ ನಿವೇಶನದಲ್ಲಿ ನಿರ್ಮಾಣ ಹಂತದಲ್ಲಿರುವ ಕಟ್ಟಡದ ಬಳಿ ಇದ್ದ ಕಬ್ಬಿಣದ ಸುತ್ತಿಗೆಯನ್ನು ತಂದು ರಾಘವೇಂದ್ರನ ತಲೆಗೆ ಬಲವಾಗಿ ಹೊಡೆದು, ರಕ್ತಗಾಯಗೊಳಿಸಿ ಕೊಲೆ ಮಾಡಿದ್ದು, ಈ ನ್ಯಾಯಾಲಯದ ಸಂಜ್ಞೆಯೊಳಗೆ ಬರುವ ಭಾರತೀಯ ದಂಡ ಸಂಹಿತೆ ಕಲಂ 302 ಸಹವಾಚಿ 34 ರನ್ವಯ ಅಪರಾಧ ಮಾಡಿರುತ್ತೀರಿ.

ಈ ಅಪರಾಧವು ಈ ನ್ಯಾಯಾಲಯದ ಸಂಜ್ಞೆಯೊಳಗೆ ಇದ್ದು ಈ ನ್ಯಾಯಾಲಯದಲ್ಲಿ ವಿಚಾರಣೆಗೆ ಗುರಿಯಾಗತಕ್ಕದ್ದೆಂದು ಈ ಮೂಲಕ ನಿರ್ದೇಶಿಸುತ್ತೇನೆ.

**(ಈ ದಿನ ದಿನಾಂಕ 27 ನೇ ಫೆಬ್ರವರಿ, 2024)**

**(ಎಂ.ಎಲ್. ರಘುನಾಥ್)**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.